ಕೆಲಸವನ್ನು ಪರೋಕ್ಷವಾಗಿ ಮಾಡುತ್ತವೆ. ಇದು ತುಂಬ ಅಪರೂಪದ ಸಂಗತಿ. ಅದೊಂದು ರೀತಿಯಲ್ಲಿ ದಾರಿಯನ್ನು ಕಾಣಿಸುತ್ತಲೇ, ಸರಿಯಾಗಿ ಸೈಕಲ್ ತುಳಿಯುವುದನ್ನೂ ಕಲಿಸಿಕೊಡುವ ಹಾಗೆ. ಅವರ ಕಣ್ಣಲ್ಲಿ ಕಂಡಿದ್ದನ್ನು ಹೇಳುತ್ತಲೇ ನಾವು ಸ್ವತಂತ್ರವಾಗಿ ನೋಡುವ 'ರೀತಿ'ಯನ್ನೂ ಕಲಿಸುವಂಥದ್ದು.

'ಜಿಜ್ಞಾಸೆ' ಇದು ಗೌರೀಶ ಕಾಯ್ಕಿಣಿ ಅವರು ಬೇರೆ ಬೇರೆ ಸಂದರ್ಭಗಳಲ್ಲಿ ಪತ್ರಿಕೆಗಳಿಗೆ ಬರೆದ ಬಿಡಿ ಬರಹಗಳ ಸಂಗ್ರಹ.

ಘನವಾದದ್ದನ್ನು ಹೇಳಲು ಸುದೀರ್ಘವಾಗಿಯೇ ಬರೆಯಬೇಕಾಗುತ್ತದೆ ಎಂಬುದು ನಮ್ಮ ಕಾಲದ ಜನಪ್ರಿಯ ನಂಬಿಕೆಗಳಲ್ಲಿ ಒಂದು. ಇಲ್ಲಿ ಒಂದು ಪುಟದ ಲೇಖನಗಳಿಂದ ಸುದೀರ್ಘವಾದ ಲೇಖನಗಳೂ ಇವೆ. ಆದರೆ ವೈಚಾರಿಕ ಸ್ಪಷ್ಟತೆಯಲ್ಲಿ, ಒಳನೋಟಗಳಲ್ಲಿ ಚಿಕ್ಕ ಲೇಖನಗಳು ಕಿರಿದೆಂದು ಎಲ್ಲೂ ಅನಿಸುವುದಿಲ್ಲ.

ಪದಮೂಲ ಮತ್ತು ಅರ್ಥಮೂಲಗಳ ಶೋಧನೆ ಇಲ್ಲಿನ ಬಹುತೇಕ ಲೇಖನಗಳಲ್ಲಿ ಕಂಡುಬರುವ ಸಾಮಾನ್ಯಗುಣ. ಈ ಎರಡೂ ಗುಣಗಳಿಗೂ ಪ್ರೇರಣೆ ನೀಡುವುದು ಅವರೊಳಗಿನ ಕುತೂಹಲ ಮತ್ತು ಪರೀಕ್ಷಕಗುಣ. ಹಾಗಾಗಿಯೇ ಇದು ಬರೀ ಒಣ ಪಾಂಡಿತ್ಯಪ್ರದರ್ಶನವಾಗುವುದಿಲ್ಲ. ಬದಲಿಗೆ ಎಲ್ಲವನ್ನೂ ನಮ್ಮ ದಿನದಿನದ ಬದುಕಿಗೇ ಒರೆಹಚ್ಚಿ ನೋಡುವ ಪ್ರಯತ್ನವಾಗಿದೆ.

ಇತ್ತೀಚೆಗೆ ಅಪಾರ ಅವರು ಬರೆದಿರುವ 'ಸರಿಗನ್ನಡಂ ಗೆಲ್ಗೆ' ಎಂಬ ಕೃತಿ ಛಂದ ಪುಸ್ತಕದಿಂದ ಪ್ರಕಟವಾಗಿದೆ. ಕನ್ನಡ ಶಬ್ದ ಮತ್ತು ವ್ಯಾಕರಣಗಳನ್ನು ರಂಜನೀಯವಾಗಿ ಹೇಳುವ ವಿಶಿಷ್ಟವಾದ ಪುಸ್ತಕವದು. ಗೌರೀಶ ಕಾಯ್ಕಿಣಿ ಅವರ ಸಮಗ್ರ ಸಾಹಿತ್ಯದ ಮೊದಲ ಸಂಪುಟದ ಮೊದಲ ಭಾಗದ ಬಹುತೇಕ ಲೇಖನಗಳು ಇದೇ ಕೆಲಸವನ್ನು ಬೇರೆ ರೀತಿಯಲ್ಲಿ ಇನ್ನಷ್ಟು ಗಹನವಾಗಿ ಮಾಡಿವೆ. ಭಾಷೆಯ ಜೊತೆಗೇ ದೈನಂದಿನ ಬದುಕು ಮತ್ತು ಅದಕ್ಕೆ ಅಂಟಿಕೊಂಡಿರುವ ನಂಬಿಕೆ-ಮೌಲ್ಯಗಳನ್ನೂ ಮೂಲಕ್ಕೆ ಹೋಗಿ ಇಲ್ಲಿನ ಲೇಖನಗಳು ನಿಷ್ಕರ್ಷೆಗೆ ಒಡ್ಡುತ್ತವೆ. ಸರ್ವವ್ಯಾಪಿಯಾಗಿ ಒಪ್ಪಿಕೊಂಡಿರುವ ಸಾಮಾಜಿಕ ಮೌಲ್ಯಗಳನ್ನು ಒಡೆದು ಕಟ್ಟುವ, ಅದರ ನಿಜದ ಅರ್ಥಕ್ಕೆ, ಸತ್ಯಾಸತ್ಯಕ್ಕೆ ಮುಖಾಮುಖಿಯಾಗುವ ಕೆಲಸವನ್ನು ಮಾಡುತ್ತವೆ. ಇಂದೂ 'ಕಟ್ಟಿದ್ದೆಲ್ಲವನ್ನೂ ಒಡೆಯುವ' ಒಂದು ಭಂಜಕ ಮನಃಸ್ಥಿತಿ ವ್ಯಾಪಕವಾಗಿ ಕಾಣಿಸುತ್ತಿದೆ. ವ್ಯಕ್ತಿ-ವಿಚಾರ-ಭೌತಿಕ ಸಂಗತಿಗಳಿಗೂ ಅನ್ವಯಿಸುವಂತೆ 'ಭಂಜಕತೆ' ಎಲ್ಲೆಲ್ಲೂ ಕಾಣಿಸಿಕೊಳ್ಳುತ್ತಿದೆ. ಆದರೆ ಗೌರೀಶ ಕಾಯ್ಕಿಣಿ ಅವರ ಲೇಖನಗಳಲ್ಲಿ ಕಾಣಿಸುವ 'ಒಡೆಯುವ ಗುಣ' ಈ ಮಾದರಿಯದ್ದಲ್ಲ. ಅದು ಜಡ್ಡುಗಟ್ಟಿರುವ, ಕ್ಲೀಷೆಗೊಂಡಿರುವ ಮೌಲ್ಯಗಳನ್ನು ಪರೀಕ್ಷಿಸಿ, ಒಳಗೊಳ್ಳುವಿಕೆಯ ಮಾದರಿಯದ್ದು. ಯಾವುದೋ ಜಡ್ಡು ಮೌಲ್ಯಗಳಿಗೆ ಕುರುಡಾಗಿ ಜೋತುಬೀಳದೆ, ಬದುಕಿನ ಸತ್ಯಕ್ಕೆ ದಿಟ್ಟವಾಗಿ ಮುಖಾಮುಖಿಯಾಗುವುದನ್ನು ಪ್ರೇರೇಪಿಸುವಂಥದ್ದು. ಇವು ತಕ್ಷಣದಲ್ಲಿ ನಾವು ಹಿಡಿದುಕೊಂಡು ನಡೆಯುತ್ತಿರುವ ಆಧಾರವನ್ನು ಅಲ್ಲಾಡಿಸಿ, ದಿಕ್ಕೆಡುವಂತೆ ಮಾಡುತ್ತವೆ ಅನಿಸಿದರೂ, ಅದರ ಮೂಲಕಾಳಜಿ ಇರುವುದು ನಮ್ಮ ಕಾಲಿನ ಶಕ್ತಿಯನ್ನೇ ನೆಚ್ಚಿಕೊಂಡು ನಡೆಯುವುದನ್ನು, ನಮ್ಮ ರೆಕ್ಕೆಯ ಶಕ್ತಿಯನ್ನೇ ನೆಚ್ಚಿಕೊಂಡು ಹಾರುವುದನ್ನು ಕಲಿಸುವುದೇ ಆಗಿದೆ.

'ಆತ್ಮಸಾಕ್ಷಿ' ಎಂಬ ಲೇಖನವನ್ನೇ ಗಮನಿಸಬಹುದು. ಆತ್ಮಸಾಕ್ಷಿ ಎಂಬುದು ನಮ್ಮ ದೈನಂದಿನ ಬದುಕಿನಲ್ಲಿ ಪದೇಪದೇ ಬಳಕೆಯಾಗುತ್ತಿರುವ ಪರಿಕಲ್ಪನೆ. 'ಅಂತರಾತ್ಮ-ಅಂತಃಕರಣ-ಆತ್ಮಸಾಕ್ಷಿ-ಮನೋದೇವತೆ ಇತ್ಯಾದಿ ಹೆಸರುಗಳಿಂದ ಸಾರ್ವತ್ರಿಕವಾದ ಈ ಪರಿಕಲ್ಪನೆ ಬರೀ ಕಲ್ಪನೆಯೋ? ವಸ್ತುಶಃ ತತ್ತ್ವಶಃ ಇದು ಏನು?' ಎಂಬ ಪ್ರಶ್ನೆಯಿಂದ ಶುರುವಾಗುವ ಈ ಲೇಖನ, ಅದರ ಬಳಕೆಯ, ಅರ್ಥಮೂಲದ ವಿವಿಧ ಮಗ್ಗಲುಗಳನ್ನು ಶೋಧಿಸುತ್ತ ಹೋಗುತ್ತದೆ. ಆತ್ಮಸಾಕ್ಷಿ ಎಂಬುದು ಏನೋ ನಿಗೂಢ ದಿವ್ಯ ಅತೀಂದ್ರಿಯ ಶಕ್ತಿ ಎಂಬ ನಂಬಿಕೆಯನ್ನು ತೀವ್ರವಾಗಿ ಪ್ರಶ್ನಿಸುತ್ತ ಪರೀಕ್ಷಿಸುತ್ತ ಹೋಗುತ್ತದೆ. ಇದಕ್ಕೆ ಅವರು ವೇದವಾಙ್ಮಯಗಳನ್ನೂ, ಯಾಜ್ಞವಲ್ಕ್ಯ, ಮನುಸ್ಮೃತಿ, ಕಾಳಿದಾಸ ಇತ್ಯಾದಿ ಶಾಸ್ತ್ರ, ಪುರಾಣ, ಕೃತಿಮೂಲಗಳನ್ನೂ ಉಲ್ಲೇಖಿಸುತ್ತಾರೆ. ಈ ಜಗತ್ತಿನಲ್ಲಿ ಎಲ್ಲರಿಗೂ ಸಾರ್ವತ್ರಿಕವಾದ 'ಆತ್ಮಸಾಕ್ಷಿ' ಎನ್ನುವುದು ಇಲ್ಲ. 'ಅದಕ್ಕೆ ಒಂದು ಸ್ವತಃಸಿದ್ಧವಾದ, ಸ್ವಯಂಭೂವಾದ, ತ್ರಿಕಾಲಾಬಾಧಿತ ಸತ್ಯದ ಇಂದ್ರಿಯಾತೀತ ದಿವ್ಯತೆಯ ಸ್ವರೂಪ ಇರುವುದಿಲ್ಲ' ಎನ್ನುವ ನಿರ್ಧಾರಕ್ಕೆ ಬರುತ್ತಾರೆ. ಅದಕ್ಕೆ